ಇ)

ತಾಲ್ಲೂಕು	ಹೊಸದಾಗಿ ಪ್ರಾರಂಭಿಸಿದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ	ಹಿರಿಯ ಪ್ರಾಥಮಿಕ ಶಾಲೆಗಳಾಗಿ ಮೇಲ್ದರ್ಜೆಗೆ ಏರಿಸಲಾದ ಶಾಲೆಗಳ ಸಂಖ್ಯೆ
1) ಬಳ್ಳಾರಿ	22	04
2) ಹೂವಿನ ಹಡಗಲಿ	-	-
3) ಹಗರಿಬೊಮ್ಮನಹಳ್ಳಿ	-	04
4) ಹೊಸಪೇಟೆ	04	08
5) ಕೂಡ್ಲಿಗಿ	-	02
6) ಸೊಂಡೂರು	02	09
7) ಸಿರಗುಪ್ಪ	07	12
ಒಟ್ಟು	**35**	**39**

ಬಳ್ಳಾರಿಯ ವಿಜಯನಗರ ಆರೋಗ್ಯ ಸಂಸ್ಥೆ ಆಧುನೀಕರಣ

352 (336) ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1998-99ನೇ ಸಾಲಿನಲ್ಲಿ ಬಳ್ಳಾರಿಯ ವಿಜಯನಗರ ಆರೋಗ್ಯ ಸಂಸ್ಥೆ (ವಿಮ್ಸ್)ಗೆ ಆಧುನೀಕರಣಕ್ಕಾಗಿ ಹಾಗೂ ಉಪಕರಣಗಳನ್ನು ಖರೀದಿಸಲು ಮಾಡಿರುವ ಹಣವೆಷ್ಟು ?

ಆ) 1999-2000 ಸಾಲಿನಲ್ಲಿ ಈ ಸಂಸ್ಥೆಗೆ ಆಯವ್ಯಯದಲ್ಲಿ ಹೆಚ್ಚು ಹಣ ಒದಗಿಸಲಾಗುವುದೇ ?

ಡಾ. ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ರೂ. 260 ಲಕ್ಷದ ಪೈಕಿ ಈವರೆವಿಗೂ 195 ಲಕ್ಷ ಅನುದಾನ 3 ಕಂತಿನಲ್ಲಿ ಬಿಡುಗಡೆಯಾಗಿರುತ್ತದೆ. ಉಳಿದ ಹಣ ಮಾರ್ಚಿ 31, 1999ರ ಒಳಗಾಗಿ ಬಿಡುಗಡೆ ಮಾಡಲಾಗುವುದು.

ಆ) ಪರಿಶೀಲನೆಯಲ್ಲಿದೆ.

ಕುರುಗೋಡು ಕ್ಷೇತ್ರದ ಎಮ್ಮಿಗನೂರು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಪದವಿಪೂರ್ವ ಕಾಲೇಜು ಸ್ಥಾಪನೆ

353 (338) ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?